೪೨೫ (೧೪೧) ಶ್ರೀ ಪಿ. ರಾಂದೇವ್ (ಮುಲ್ಲೇಶ್ವರಂ).—ಮಾನ್ಯ ಕಾನೂನು ಮತ್ತು ಸಂಸದೀಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

(ಅ) ಬೆಂಗಳೂರು ನಗರದಲ್ಲಿ ತೀವ್ರ ವಸತಿ ಸಮಸ್ಯೆ ಇರುವುದನ್ನು ಹೋಗಲಾಡಿಸಲು ಸರ್ಕಾರದವರು ಕೈಗೊಂಡ ಕ್ರಮಗಳು ಏನು?

(ಆ) ಬೆಂಗಳೂರಿನ ವಸತಿ ಸಮಸ್ಯೆಯ ಬಗ್ಗೆ ಸಮೀಕ್ಷೆ ನಡೆಸಲಾಗಿದೆಯೇ?

(ಇ) ಸಮೀಕ್ಷೆಯ ಅಥವಾ ಸಮಸ್ಯೆಯ ಬಗ್ಗೆ ಸರ್ಕಾರಕ್ಕೆ ಬಂದ ವರದಿಯ ಸಾರಾಂಶ ಏನು?

(ಈ) ಬೆಂಗಳೂರಿನಲ್ಲಿರುವ ಬಡಹಳ್ಳಿಗರಿಗೆ ವಸತಿಯನ್ನು ಪೂರೈಸಲು ಸರ್ಕಾರದವರ ಮುಂದಿನ ಸಲಹೆಗಳಾವುವು?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ಮಂತ್ರಿಗಳು).—

(ಅ) ಕರ್ನಾಟಕ ಗೃಹ ಮಂಡಲಿಯು ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ನಗರದಲ್ಲಿ ಹಾಗೂ ಕೆಂಗೇರಿ ಉಪನಗರ ಮತ್ತು ಯಲಹಂಕ ನಗರದಲ್ಲಿ ಮನೆಗಳನ್ನು ಕಟ್ಟಿ ಬೆಂಗಳೂರು ನಗರದ ವಸತಿ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ಹೋಗಲಾಡಿಸಲು ಪ್ರಯತ್ನಿಸುತ್ತಿವೆ.

(ಆ) ಗೃಹ ಮಂಡಲಿಯು ಬೆಂಗಳೂರು ಸರಹದ್ದಿನಲ್ಲಿಳಿ ಸ್ಥಳಗಳಲ್ಲಿ ವಸತಿ ಬೇಡಿಕೆ ಸಮೀಕ್ಷೆ ನಡೆಸಿದೆ.

(ಇ) ಸಮೀಕ್ಷೆ ನಡೆಸಿದ ಬಾಗಲಕುಂಟೆ (ವಿಡಿಯಾ ಕಾರ್ಖಾನೆ ಹತ್ತಿರ) ಮಾರತ್ತಹಳ್ಳಿ, ನೆಲ್ಲೂರಹಳ್ಳಿ (ವೈಟ್ ಫೀಲ್ಡ್) ಮತ್ತು ಚುಂಚಾಪುರದ ಹತ್ತಿರದ ಉಪನಗರಗಳಿಂದ ಒಟ್ಟು ೨,೪೪೪ ಅನೇಕ ವರ್ಗದ ಮನೆಗಳಿಗೆ ಬೇಡಿಕೆ ಬಂದಿದೆ.

(ಈ) ಈ ವಿಷಯದಲ್ಲಿ ಸದ್ಯಕ್ಕೆ ಸರ್ಕಾರದ ಮುಂದೆ ಯಾವ ಯೋಜನೆಯೂ ಇಲ್ಲ.

ಶ್ರೀ ಪಿ. ರಾಮದೇವ್.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಒಂದು ಚಿತ್ರ ತಮ್ಮ ಮುಂದೆ ಇದೆ ಎಂದು ನಾನು ಅಂದುಕೊಂಡಿದ್ದೇನೆ. ಇಲ್ಲಿ ಬಾಡಿಗೆಗೆ ಮನೆಗಳು ಸಿಗಬೇಕಾದರೆ ಬಹಳ ಕಷ್ಟ. ಆದರಲ್ಲಿಯೂ ಕೂಡ ಸಣ್ಣ ಸಣ್ಣ ಮನೆಗಳು ಸಿಗುತ್ತಾ ಇಲ್ಲ. ಹಿಂದೆ ಇದರ ಬಗ್ಗೆ ಒಂದು ಸರ್ವೆ ಆಗಿದೆ. ಇಲ್ಲಿ ಒಂದು ಲಕ್ಷ ಮನೆಗಳ ಅವಶ್ಯಕತೆ ಇದೆ ಎಂದು ಒಂದು ಸಮೀಕ್ಷೆ ನಡೆಸಿದೆ. ಅವರಿಗೆಲ್ಲಾ ಅಕಾಮಡೇಟ್ ಮಾಡಬೇಕಾದರೆ ವರ್ಷಕ್ಕೆ ೨ ಸಾವಿರ ಮನೆಗಳನ್ನು ಕಟ್ಟಿದರೂ ಕೂಡ ೧೦ ವರ್ಷವಾದರೂ ಕೂಡ ಈ ಕೊರತೆಯನ್ನು ಪೂರೈಸಲಿಕ್ಕೆ ಆಗುವುದಿಲ್ಲ. ಇಲ್ಲಿ ಎಲ್ಲರಿಗೂ ಅಕಾಮಡೇಟ್ ಮಾಡಿಕೊಡುವ ಹಾಗೆ ಈ ದಿಶೆಯಲ್ಲಿ ಸರ್ಕಾರ ಏನು ಯೋಜನೆ ಮಾಡಿದೆ ಎಂದು ಕೇಳುತ್ತೇನೆ. ಕರ್ನಾಟಕ ಹೌಸಿಂಗ್ ಬೋರ್ಡ್‌ನವರಾಗಲಿ, ಬಿ. ಡಿ. ಎ ಅವರಾಗಲಿ ೨೦೦-೩೦೦ ಮನೆಗಳನ್ನು ಕಟ್ಟಿಸಿದರೂ ಸಹ ಅದು ಏನೇನೂ ಸಾಕಾಗುವುದಿಲ್ಲ. ಆದುದರಿಂದ ಒಂದು ಮ್ಯಾಸಿವ್ ಸ್ಕೇಲ್‌ನಲ್ಲಿ ಬೇರೆಯವರ ಮುಖಾಂತರವಾದರೂ ಈ ಸಣ್ಣ ಸಣ್ಣ ಮನೆಗಳನ್ನು ಕಟ್ಟಿಸಿಕೊಡಲು ಸರ್ಕಾರದ ಮುಂದೆ ಏನಾದರೂ ಒಂದು ಯೋಜನೆ ಮಾಡಿದ್ದಾರೆಯೇ ಅಥವಾ ಏನಾದರೂ ಪ್ರಯತ್ನ ಪಟ್ಟಿದ್ದಾರೆಯೇ ಎಂದು ನಾನೂ ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದು ಹೌಸಿಂಗ್ ಬೋರ್ಡ್‌ಗೆ ಸಂಬಂಧಪಟ್ಟ ಪ್ರಶ್ನೆ ಆದರೂ ಸಹ ನಾನು ಉತ್ತರ ಹೇಳುತ್ತೇನೆ. ಮೊಟ್ಟ ಮೊದಲನೆಯದಾಗಿ ೧೯೭೫ನೇ ಇಸವಿಯಲ್ಲೇ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯ ೬೪ನೇ ಸೆಕ್ಷನ್ ಪ್ರಕಾರ ಹೌಸಿಂಗ್ ಬೋರ್ಡ್‌ನವರು ನೇರವಾಗಿ ಮನೆಗಳನ್ನು ಕಟ್ಟಿಸಿಕೊಡುವುದನ್ನು ನಿಶೇಧಿಸಲಾಗಿದೆ. ಅವರಿಗೆ ಬಿ. ಡಿ. ಎ. ನವರು ಏನಾದರೂ ಜಾಗ ಕೊಟ್ಟರೆ ಮಾತ್ರ ಹೌಸಿಂಗ್ ಬೋರ್ಡ್‌ನವರು ಕಟ್ಟಿಸುವ ವ್ಯವಸ್ಥೆ ಇದೆ. ೧೯೭೫ ಇಸವಿಯಿಂದ ಈಚೆಗೆ ಅವರು ಮನೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆ ಇಲ್ಲ. ಶ್ರೀಮಾನ್ ರಾಮದೇವ್ ರವರು ಈ ಬಗ್ಗೆ ಪ್ರಶ್ನೆ ಹಾಕಿರುವುದು ಬೃಹತ್ ಪ್ರಮಾಣದಲ್ಲಿ, ಕಡಿಮೆ ಆದಾಯ ವರ್ಗದವರೆಗೆ ಸಿಗಬೇಕು ಎನ್ನುವ ದೃಷ್ಟಿಯಿಂದ ಹಾಕಿದ್ದಾರೆ. ಇದು ಅಗತ್ಯ ಇಲ್ಲ ಎಂದು ನಾನು ಹೇಳುವುದಿಲ್ಲ. ಆದರೆ ಸರ್ಕಾರದವರು ಇದರ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದಾರೆ. ಎನ್ನುವುದನ್ನು ಡೀಟೇಲ್ ಆಗಿ ಕೇಳಬೇಕಾದರೆ ಇದಕ್ಕೆ ಉತ್ತರ ಕೊಡಬೇಕಾದವರು ನಗರಾಡಳಿತ ಮಂತ್ರಿಗಳಾದ ಶ್ರೀಮಾನ್ ಚಂದ್ರಶೇಖರ್‌ರವರು. ಈಗ ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ ಆದಷ್ಟು

ಮಂಟ್ಪಗೆ ಮನೆಗಳನ್ನು ಕಟ್ಟಿಸಿಕೊಡುವ ಒಂದು ವ್ಯವಸ್ಥೆ ನಡೆಯುತ್ತಾ ಇದೆ. ಆದರೂ ಸಹ ಇದರ ಬಗ್ಗೆ ಏನು ಒಂದು ಸರ್ವೆ ನಡೆಸಿದ್ದಾರೆ ಅದರ ಬಗ್ಗೆ ಡೀಟೇಲ್ ಆಗಿ ಪರಿಶೀಲನೆ ಮಾಡುತ್ತಿದ್ದೇವೆ. ಮಾನ್ಯ ಪಿ. ರಾಮದೇವ್‌ರವರು ಹೇಳಿತಕ್ಕಂಥಾದ್ದು ಇದು ಮೂಲ ಭೂತವಾದ ಪ್ರಶ್ನೆ. ಇದು ಒಂದು ದೊಡ್ಡ ಪ್ರಶ್ನೆ. ಈ ಬಗ್ಗೆ ಒಂದು ಯೋಜನೆಯೂ ಸಹ ಸರ್ಕಾರದ ಮುಂದೆ ಇದೆ. ಈ ಜನರಿಗೆ ಮನೆಗಳನ್ನು ಕಟ್ಟಿಸಿಕೊಡುವ ಹಾಗೆ ಏನಾದರೂ ಒಂದು ಮಾಡಬೇಕು ಎನ್ನುವ ಚಿಂತನೆ ಸರ್ಕಾರಕ್ಕೆ ಇದೆ ಎಂದು ಅಷ್ಟು ಮಾತ್ರ ನಾನು ಹೇಳಬಯಸುತ್ತೇನೆ.

ಶ್ರೀ ಪಿ. ರಾಮದೇವ್.—ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ಅವರು ಇರತಕ್ಕಂಥ ಮನೆ ಬಹುಶಃ ೧-೧½ ಚದರ ಗಜ ಇರಬಹುದು. ಅವರಿಗೆ ಬಹುಶಃ ೪೦-೪೫ ವರ್ಷದ ಹಿಂದೆ ಅದು ಅಲಾಟ್ ಆಗಿರಬಹುದು. ನನಗೂ ಅಂತಹ ಮನೆ ಸಿಕ್ಕುವುದಿಲ್ಲ. ನಾನು ಇದರ ಬಗ್ಗೆ ಹೇಳುವುದೇನೆಂದರೆ ಈ ಒಂದು ಬೃಹತ್ ಸಮಸ್ಯೆಯನ್ನು ನಿವಾರಿಸಲು ಖಾಸಗಿಯವರಿಗಾದರೂ ಒಂದು ಬೆಂಬಲಕೊಟ್ಟು, ಪ್ರೋತ್ಸಾಹ ಕೊಟ್ಟು ಅವರಿಂದಲಾದರೂ ಈ ಕೆಲಸವಾಗುವ ಹಾಗೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಇದು ಒಳ್ಳೆಯ ಸಲಹೆ.

ಸದಲಗಾ ಪಂಚಾಯಿತಿಯನ್ನು ಪುರಸಭೆಯಾಗಿ ವರ್ಗೀಕರಿಸುವುದು

೪೨೬ (೨೬೨) ಶ್ರೀ ಪಿ. ಪಿ. ಹೆಗಡೆ (ಚಿಕ್ಕೋಡಿ).—ಮಾನ್ಯ ನಗರಾಡಳಿತ ಮತ್ತು ಬೆಂಗಳೂರು ಪ್ರಾಧಿಕಾರದ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಸದಲಗಾ ಪುರಸಭೆ ಪಂಚಾಯಿತಿಯನ್ನು ಎಂದು ಪುರಸಭೆಯಾಗಿ ವರ್ಗೀಕರಿಸಲಾಯಿತು ಮತ್ತು ಅದಕ್ಕೆ ಕಾರಣಗಳೇನು ತಿಳಿಸುವಿರಾ ?

ಆ) ೧೯೬೦-೬೧, ೧೯೬೧-೬೨ ಮತ್ತು ೧೯೬೨-೬೩ನೇ ಸಾಲುಗಳಲ್ಲಿ ಎಲ್ಲಾ ಬಾಬುಗಳಿಂದ ಪುರಸಭೆಯ ಒಟ್ಟು ಆದಾಯ ಎಷ್ಟು ? (ವಿವರಗಳು ಒದಗಿಸಬೇಕಾಗಿ ವಿನಂತಿ)

ಇ) ಆ ಸಾಲುಗಳಲ್ಲಿ ನಿಮ್ನ ಜಾತಿ ಮತ್ತು ನಿಮ್ನ ವರ್ಗದವರ ಕ್ಷೇಮಕ್ಕಾಗಿ ಆಯವ್ಯಯದ ಶೇಕಡಾ ೧೮ರಷ್ಟು ಮೊತ್ತವನ್ನು ವಿಂಗಡಿಸಲಾಗಿದೆಯೇ ?

ಈ) ಖರ್ಚು ಮಾಡಿದ ಒಟ್ಟು ಹಣ

ಉ) ಆ ವರ್ಷಗಳಲ್ಲಿ ಕೆಳಕಂಡ ಬಾಬುಗಳಿಗೆ ಆದ ಖರ್ಚು ಎಷ್ಟು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಬೆಂಗಳೂರು ಪ್ರಾಧಿಕಾರ ಮಂತ್ರಿಗಳು).—

ಅ) ದಿನಾಂಕ ೧೭-೨-೧೯೬೩ರಂದು ವರ್ಗೀಕರಿಸಲಾಯಿತು. ಪ್ರಜಾ ಸಂಖ್ಯೆ ಮತ್ತು ಸಾರ್ವಜನಿಕರ ಅಭಿಪ್ರಾಯವನ್ನು ಗಮನಿಸಿ ಪುರಸಭೆಯಾಗಿ ಮಾರ್ಪಾಡು ಮಾಡಲಾಗಿತ್ತು.

ಆ) ವಿವರಗಳು ಕೆಳಕಂಡಂತೆ ಇದೆ.

ಬಾಬು	೧೯೬೦-೬೧	೧೯೬೧-೬೨	೧೯೬೨-೬೩
೧. ಆರಂಭದ ಶಿಲ್ಕು	—	೩೫೦೨೨೨-೫೧	೩೨೧೫೪೪-೦೦
೨. ಪುರ ಸಭೆಯ ಕರಗಳು	೬೪೪೭೬-೧೨	೮೭೮೭೩-೮೨	೭೮೯೧೨-೦೦
೩. ಸಂತೆ ಕರ	೪೨೧೧-೦೦	೧೧೯೪-೦೦	೩೮೦೩-೦೦